, ಶ್ರೀ ಬಿ. ಎಚ್. ಬೋರಣ್ಣಗೌಡರು.—ಮಿಕ್ಕ ಕೇಸುಗಳನ್ನು ವಿಚಾರಣೆಗೆ ತೆಗೆದುಕೊಳ್ಳಲು ಎಷ್ಟು ದಿವಸವಾಗುತ್ತದೆ ?

The Hon'ble Sri H. C. DASAPPA.—Enquiries are still pending investigation.

ಶ್ರೀ ಬಿ. ಎಚ್. ಬೋರಣ್ಣಗೌಡರು.—ತನಿಖೆ ಇನ್ನೂ ಸಂಪೂರ್ಣವಾಗಿಲ್ಲವೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮೂರು ಕೇಸುಗಳಲ್ಲಿ ಇತ್ಯರ್ಥವಾಗಿದೆ; ಇನ್ನು ನಾಲ್ಕರಲ್ಲಿ ತನಿಖೆ ನಡೆಯುತ್ತಿದೆ; ಇನ್ನೊಂದರಲ್ಲಿ ವಿಚಾರಣೆ ನಡೆಯುತ್ತಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—1949ರಿಂದ 1951ರ ವರೆಗೆ ಇಷ್ಟು ವರ್ಷವಾದರೂ ಇಷ್ಟು ಮಾತ್ರ ಆಗಿದ್ದರೆ, ಅಷ್ಟು ಪೂರ್ತಿಯಾಗಲು ಇನ್ನೆಷ್ಟು ವರ್ಷವಾಗುತ್ತದೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—It does take some time to conduct enquiry.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಆದಷ್ಟು ಬೇಗ ತೀರ್ಮಾನವಾಗಬೇಕೆಂದು ಲಂಚ ನಿರೋಧ ಇಲಾಖೆಗೆ ಹೇಳುವುದಕ್ಕಾಗುತ್ತದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮಾಡುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಯಾವ ಅಧಿಕಾರಿಗಳ ವಿಚಾರದಲ್ಲಿ ವಿಚಾರಣೆ ನಡೆಯುತ್ತಿದೆಯೋ ಅವರನ್ನು ಈ ತನಿಖೆ ನಡೆಯುವಾಗ ಸಸ್ಪೆಕ್ಷನ್‌ನಲ್ಲಿಟ್ಟಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್

ಶ್ರೀ ಬಿ. ಎಚ್. ಬೋರಣ್ಣಗೌಡರು.—ಈ ಅಧಿಕಾರಿಗಳನ್ನು ಕೆಲಸದಮೇಲೆ ಇಟ್ಟುಕೊಂಡರೆ ಅವರು ಮಾಡಿರ ತಕ್ಕ ತಪ್ಪನ್ನು ಮುಚ್ಚಲು ಏನು ಪ್ರಯತ್ನ ಮಾಡಬಹುದೊ ಅದನ್ನು ಮಾಡುತ್ತಾರೆಂಬುದು ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಾಧಾರಣವಾಗಿ ಅವರು ಯಾವ ಕ್ಷೇತ್ರದಲ್ಲಿ ತಪ್ಪು ಮಾಡಿದರೆಂದು ಆಪಾದನೆಯಿರುತ್ತದೆಯೋ ಅದನ್ನು ತಪ್ಪಿಸಿ ಅಲ್ಲಿಂದ ಬೇರೆಕಡೆಗೆ ವರ್ಗಮಾಡುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹೀಗೆ ಬೇರೆ ಡಿಸ್ಟ್ರಿಕ್ಟಿಗೆ ವರ್ಗಮಾಡಿದರೂ ಅವರು ಬೇಕಾದಾಗ ಆ ಡಿಸ್ಟ್ರಿಕ್ಟಿನಿಂದ ಈ ಡಿಸ್ಟ್ರಿಕ್ಟಿಗೆ ಬರುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಾಧಾರಣವಾಗಿ ಆಗುವುದಿಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಸಾಧಾರಣವಾಗಿ, ಅಂದರೆ ತಿಂಗಳಿಗೊಂದು ಸಾರಿಯೂ ಬರುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು—ತಿಂಗಳಿಗೊಂದು ಸಾರಿಯೂ ಬರುವುದಕ್ಕಾಗುವುದಿಲ್ಲ. They will be on duty.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯಜಿಲ್ಲೆ).—ಹೀಗೆ ಲಂಚದ ಆಪಾದನೆ ಬಂದಿತೆಂದು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಮಾಡಿದರೆ ಅಲ್ಲಿ ಲಂಚ ತೆಗೆದುಕೊಳ್ಳುವುದಿಲ್ಲವೆಂತಲೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಪಾದನೆ ಬಂದ ತಕ್ಷಣ ಅವರು ಲಂಚ ತೆಗೆದುಕೊಂಡಿದ್ದಾರೆ ಎಂದು ಊಹಿಸಬೇಕೆಂದಿಲ್ಲ. ಆದರೆ ಅವರು ಅಲ್ಲೇ ಇದ್ದರೆ ತನಿಖೆ ನಡೆಸುವುದು ಕಷ್ಟ. ಆದ್ದರಿಂದ at best, what we can do is to transfer them so that the enquiry may not be prejudiced.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅವರನ್ನು ವರ್ಗಮಾಡಿದರೆ ಅವರು ಬೇರೆ ಕಡೆಯಲ್ಲಿ ಲಂಚ ತೆಗೆದುಕೊಳ್ಳುವುದಿಲ್ಲವೆಂದು ಭಾವನೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೀವು ಕೇಳುವುದು ಸಮಂಜಸವಾಗಿ ಕಾಣುವುದಿಲ್ಲ. ಲಂಚ ತೆಗೆದುಕೊಂಡರೆಂದು ಯಾವುದೋ ಒಂದು ಆಪಾದನೆ ಬಂದಿದೆ; ಆದ್ದರಿಂದ ಸದ್ಯಕ್ಕೆ ತನಿಖೆಗೆ ತೊಂದರೆಯಾಗದಂತಿರಲೆಂದು ಹೀಗೆ transfer ಮಾಡುತ್ತೇವೆ. ವಿಚಾರಣೆಯಾದ ಮೇಲೆ ಅವರು ನಿಸ್ಪೃಹರು, ಲಂಚ ರುಷುವತ್ತು ತೆಗೆದುಕೊಂಡಿಲ್ಲವೆಂದು ಗೊತ್ತಾದರೆ ನೀವು ಹೇಳಿದ ಹಾಗೆ ಕಾರ್ಯಕ್ರಮತೆಗೆದುಕೊಳ್ಳುವುದು ಅನ್ಯಾಯವಾದಂತಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಹೀಗೆ ವರ್ಗಮಾಡಬೇಕಾದರೆ, ಇಂಥ ಒಂದು ಅರ್ಜಿ ಬಂದ ತಕ್ಷಣ ಮಾಡಿಬಿಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

Mr. SPEAKER.—Next question. Sri K. Sampangi Ramiah.

Cases pending in the Court of Special First Class Magistrate, Chikballapur.

*ಪ್ರಶ್ನೆ 86.—ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) 1949–50ನೆಯ ಸಾಲಿನಲ್ಲಿ ಮತ್ತು 1950–51ನೆಯ ಸಾಲಿನಲ್ಲಿ (ತಹಲ್‌ವರೆಗೆ) ಚಿಕ್ಕಬಳ್ಳಾಪುರದ ಮೊದಲನೆಯ ತರಗತಿಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಾಖಲ್ಮಾಡಲ್ಪಟ್ಟ ಮೊಕದ್ದಮೆಗಳ ಸಂಖ್ಯೆ ಎಷ್ಟು ;

(b) ಕಳೆದ ಐದು ವರ್ಷಗಳ ಕಾಲದಲ್ಲಿ ಸರಾಸರಿ ಎಷ್ಟು ಮೊಕದ್ದಮೆಗಳು ದಾಖಲ್ಮಾಡಲ್ಪಟ್ಟವೆ ;

(c) ಕಳೆದು ಐದು ವರ್ಷಗಳ ಕಾಲದಲ್ಲಿ ಎಷ್ಟು ಮೊಕದ್ದಮೆಗಳು ಇತ್ಯರ್ಥಗೊಳಿಸಲ್ಪಟ್ಟಿವೆ ;

(d) 1950ನೆಯ ಇಸವಿ ಏಪ್ರಿಲ್- 1ನೆಯ ತಾರೀಖಿನ ದಿನ ಮತ್ತು 1951ನೆಯ ಇಸವಿ ಫೆಬ್ರುವರಿ 28ನೆಯ ತಾರೀಖಿನ ದಿನ ಇತ್ಯರ್ಥವಾಗಬೇಕಾಗಿದ್ದ ಮೊಕದ್ದಮೆಗಳು ಎಷ್ಟು ಉಳಿದಿದ್ದುವು ;

(e) ಆ ಕೋರ್ಟಿನಲ್ಲಿ ವಿಶೇಷವಾಗಿ ಬಾಕಿ ನಿಂತಿರುವ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಲು ಹಂಗಾಮಿಯಾಗಿ ಒಂದು ಕೋರ್ಟನ್ನು ಏರ್ಪಡಿಸಬೇಕೆಂದು ಸರ್ಕಾರದವರು ಉದ್ದೇಶಿಸಿರುತ್ತಾರೆಯೆ ?

ಉತ್ತರ.—ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ನ್ಯಾಯಾಂಗ ಮತ್ತು ಕಾರ್ಮಿಕ ಶಾಖೆಗಳ ಸಚಿವರು).—

(a) ಸಾಲು	ದಾಖಲಾಗಿದ್ದಲ್ಲಿ ಮೊಕದ್ದಮೆಗಳ ಸಂಖ್ಯೆ
1949—50	1,111
1950—51 (1951ನೆಯ ಇಸವಿ ಮಾರ್ಚಿ 12ನೆಯ ತಾರೀಖಿನವರೆಗೆ)	1,735

(b) 761·4

(c) 3,527

(d) 1950ನೆಯ ಇಸವಿ ಏಪ್ರಿಲ್ 1ನೆಯ ತಾರೀಖಿನ ದಿನ ಇತ್ಯರ್ಥವಾಗದೆ ಉಳಿದಿದ್ದ ಮೊಕದ್ದಮೆಗಳ ಸಂಖ್ಯೆ 368 ಮತ್ತು 1951ನೆಯ ಇಸವಿ ಫೆಬ್ರವರಿ 28ನೆಯ ತಾರೀಖಿನ ದಿನ ಇತ್ಯರ್ಥವಾಗದೆ ಉಳಿದಿದ್ದ ಮೊಕದ್ದಮೆಗಳ ಸಂಖ್ಯೆ 801.

(e) ಈ ವಿಷಯವು ಮೈಸೂರು ಹೈಕೋರ್ಟಿನವರ ಪರಿಶೀಲನೆಯಲ್ಲಿದೆ.

Sri K. SAMPANGI RAMIAH.—ಹಂಗಾಮಿ ಕೋರ್ಟ್‌ನ್ನು ಸ್ಥಾಪಿಸುವ ವಿಷಯವು ಹೈಕೋರ್ಟಿನವರ ಅಜಮಾಯಿಷಿಯಲ್ಲಿದೆಯೆಂದು ಹೇಳಿದ್ದೀರಿ. ಅದು ಎಷ್ಟು ದಿವಸದಿಂದ ಹೀಗೆ pending ನಲ್ಲಿದೆ.

The Hon'ble Sri K. T. BHASHYAM.—I have no idea. It is probably pending before them; How long it is pending cannot say.

Sri K SAMPANGI RAMIAH.—ಇನ್ನೂ ಅದು ಇತ್ಯರ್ಥವಾಗಲು ಎಷ್ಟು ದಿವಸವಾಗುತ್ತದೆ.

The Hon'ble Sri K. T. BHASHAYAM—I do not know. They are at it. It is likely that very soon they will be able to make a report on the matter, As I said in connection with an other subject the entire question is under investigation.

Sri K. SAMPANGI RAMIAH.—ಈಗ ಆ ಕೋರ್ಟಿನಲ್ಲಿ Pendency ಬಹಳ ಜಾಸ್ತಿಯಾಗಿರುವುದರಿಂದ ಇದನ್ನು ಬಹಳ ತುರ್ತಾಗಿ ಮಾಡಬೇಕಾಗಿದೆಯಲ್ಲವೆ?

The Hon'ble Sri K. T. BHASHYAM.—I agree it is a matter of some urgency.

Sri K. SAMPANGI RAMIAH.—ಅದಷ್ಟು ಜಾಗ್ರತೆ ಮಾಡಬೇಕೆಂದು ಹೈಕೋರ್ಟಿನವರಿಗೆ ತಿಳಿವಳಿಕೆ ಕೊಡುತ್ತೀರಾ? ಮೊದಲು 368 ಕೇಸುಗಳು ಮುಲ್ಕಿಯಲ್ಲಿತ್ತು. ಈಗ ಮುಲ್ಕಿ 801 ಆಗಿ ಒಂದಕ್ಕೆ ಎರಡರಷ್ಟಾಗಿದೆ.

The Hon'ble Sri K. T. BHASHYAM.—We shall ask the High Court to expedite.

Sri K. SAMPANGI RAMIAH.—ಹೀಗೆ ಕೇಸುಗಳು ಬಹಳ ನಿಧಾನವಾಗುತ್ತಿರುವುದರಿಂದ ಬಂದ ಸಾಕ್ಷಿಗಳು ವಿಚಾರಣೆಯಿಲ್ಲದೆ ಪದೇ ಪದೇ ಹಿಂದಕ್ಕೆ ಹೋಗಬೇಕಾಗಿ ಬಂದು ಕಕ್ಷಿಗಾರರು ಬಹಳ ತೊಂದರೆ ಪಡುತ್ತಿರುವುದರಿಂದ ಇದನ್ನು ಜಾಗ್ರತೆಗೊಳಿಸುತ್ತೀರಾ?

The Hon'ble Sri K. T. BHASHYAM.—We shall see. We have received a reference in respect of that matter from the District Magistrate of Kolar on the 10th of February. We are trying to expedite the matter.

Sri K. SAMPANGI RAMIAH.—ಈಗ ಎರಡು ಮೂರು ವರ್ಷಗಳ ಹಿಂದೆಯೇ ಅಲ್ಲಿಗೊಂದು ಸ್ಪೆಷಲ್ ಕೋರ್ಟ್ ಬೇಕೆಂದು ಕೇಳಿರಲಿಲ್ಲವೇ?

The Hon'ble Sri K. T. BHASHYAM.—I do not know about any reference made two or three years ago. The latest reference we have received is on 10-2-51.

Sri K. SAMPANGI RAMIAH.—ಈಗ ಪ್ರೊಹಿಬಿಷನ್ ತಕ್ಕೀರುಗಳು ಜಾಸ್ತಿಯಾಗಿರುವುದರಿಂದ ಈ ಕೂಡಲೇ ಅಲ್ಲಿಗೊಂದು ಹಂಗಾಮಿಯಾಗಿ ಕೋರ್ಟನ್ನು ಏರ್ಪಡಿಸುವುದನ್ನು ಯೋಚನೆಮಾಡುತ್ತೀರಾ?

The Hon'ble Sri K. T. BHASHYAM.—In fact that may be the reason why the number of cases pending has increased and we are, as I said, considering the question of opening another temporary court.

Sri K. SAMPANGI RAMIAH.—ಈಗ ಅಲ್ಲಿರುವ ಮ್ಯಾಜಿಸ್ಟ್ರೇಟರಿಗೆ Summary Powers ಕೊಟ್ಟಿದ್ದೀರಾ?

The Hon'ble Sri K. T. BHASHYAM—I have no idea. He is ordinarily a First Class Magistrate with certain summary powers.

Sri K. SAMPANGI RAMIAH.—ಇನ್ನು ಮೇಲಾದರೂ ಅಲ್ಲಿಗೆ ಬರತಕ್ಕ ಇನಾಂದಾರರ ಜಗಳಗಳನ್ನು ವಿಚಾರಣೆಮಾಡುವುದಕ್ಕೆ ಅವರಿಗೆ Summary Powers ಕೊಡುತ್ತೀರಾ?

The Hon'ble Sri K. T. BHASHYAM.—That is hypothetical.

Sri K. SAMPANGI RAMIAH.—ಹಾಗೇನಾದರೂ ಜಗಳದ ಕೇಸುಗಳು ಬಂದರೆ ಕೊಡುತ್ತೀರಾ?

The Hon'ble Sri K. T. BHASHYAM.—That is also hypothetical.

Mr. SPEAKER.—Next question. Janab Syed Abdur Rahman.